ಇ) ಪರಿಶಿಷ್ಟ ಜಾತಿ ಆಯ್ಕೆಯಾದ ಕೊನೆ

| | | |
|---|---|---|
| ಅಭ್ಯರ್ಥಿ ಗಳಿಸಿದ ರ್‍ಯಾಂಕ್ ಸಂಖ್ಯೆ | ... | ೬೯೧೯ |
| ಪರಿಶಿಷ್ಟ ಬುಡಕಟ್ಟು | ... | ೭೯೧೪ |
| ಹಿಂದುಳಿದ ಬುಡಕಟ್ಟು | ... | ೭೯೬೭ |
| ಹಿಂದುಳಿದ ಜಾತಿ | ... | ೭೭೨೯ |
| ಹಿಂದುಳಿದ ಕೋಮು | ... | ೩೩೮೨ |
| ಆರ್ಥಿಕವಾಗಿ ಹಿಂದುಳಿದ ವಿಶೇಷ ಗುಂಪು | ... | ೨೫೦೯ |
| ಸಾಮಾನ್ಯ ಅರ್ಹತೆ | ... | ೪೮೬ |

## ರೋಣ ನಗರಕ್ಕೆ ೩೦ ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಮಂಜೂರು ಮಾಡುವ ಬಗ್ಗೆ

೩೦೩. *ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೋಣ ನಗರದಲ್ಲಿ ೩೦ ಹಾಸಿಗೆಗಳುಳ್ಳ ಆಸ್ಪತ್ರೆಯು ಮಂಜೂರಾತಿಗಾಗಿ ಸರ್ಕಾರಕ್ಕೆ ಮನವಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಆಸ್ಪತ್ರೆಯು ಮಂಜೂರಾತಿಗಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು).—

ಅ) ಬಂದಿದೆ.

ಆ) ಭಾರತ ಜನಸಂಖ್ಯಾ ಯೋಜನೆ-೩ರಡಿಯಲ್ಲಿ ರೋಣದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕವನ್ನು ಸಮುದಾಯ ಆರೋಗ್ಯ ಘಟಕವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿ ಈಗಾಗಲೇ ಸರ್ಕಾರಿ ಆಜ್ಞೆ ಹೊರಡಿಸಲಾಗಿದೆ. ಕಟ್ಟಡದ ನಿರ್ಮಾಣ ಕಾರ್ಯವನ್ನು ಸಹ ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ.

## ರಾಜ್ಯದಲ್ಲಿ ಮದ್ಯಪಾನ (ಹೆಂಡ) ಮಾರಾಟದ ಬಗ್ಗೆ

೩೫೪. ಶ್ರೀ ಪಿ.ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಆರೋಗ್ಯ ಮಂತ್ರಿ ಆಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈಗ ಮಾರಾಟ್ತಿರುವ ಮದ್ಯಪಾನ (ಹೆಂಡ)ದಲ್ಲಿ ಕೃತಕ ರಾಸಾಯನಿಕ ವಸ್ತು ಗಳನ್ನು ಬೆರಕೆ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಆ) ಸಾರಾಯಿ ಶೀಶೆಗಳನ್ನು ಸರ್ಕಾರದವರು ಸೀಲ್ ಮಾಡಿ ಮಾರಾಟ ಮಾಡಿಸುತ್ತಿದ್ದರು, ಈ ಶೀಶೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಚಿಲ್ಲರೆಯಾಗಿ ಕಲಬೆರಕೆ ಮಾಡಿ ಮಾರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದ್ದಾರೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಆಬಕಾರಿ ಸಚಿವರು).—

ಅ) ಕಲಬೆರಕೆ ಶೇಂದಿ ಮಾರಾಟದ ಬಗ್ಗೆ ಯಾವುದೇ ವರದಿಯು ಇದುವರೆವಿಗೂ ಬಂದಿರುವುದಿಲ್ಲ. ಆ ರೀತಿ ಕಂಡು ಬಂದಲ್ಲಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಮೊಹರು ಮಾಡಿದ ಶೀಶೆಗಳಲ್ಲಿ ಕಲಬೆರಕೆ ಸಾರಾಯಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಚಿಲ್ಲರೆಯಾಗಿ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ. ಸದ್ಯಕ್ಕೆ ಸಾರಾಯಿಯನ್ನು ಶೀಶೆಗಳಲ್ಲಿ ಮೊಹರು ಮಾಡದೆ ಚಿಲ್ಲರೆಯಾಗಿ ಮಾರಾಟ ಮಾಡಲಾಗುತ್ತಿದೆ.